"ತಂದೆ ಮತ್ತು ಮಕ್ಕಳ ನಡುವೆ ಉತ್ತಮ ಬಾಂಧವ್ಯ ಇಲ್ಲ ಅಂತ ಅಲ್ವೇ?" ನನ್ನ ಊಹನೆ.

"ಕರೆಕ್ಟ್. ಅದಕ್ಕಿಂತಲೂ ಮುಖ್ಯವಾದದ್ದೊಂದು ಇದೆ! ಈ ವಾಕಿಂಗ್ ಸ್ಟಿಕ್ಕಿನಲ್ಲಿ ಏನೋ ರಹಸ್ಯ ಅಡಗಿದೆ!! ಹಾಗಾಗಿ ಅವರು ವಾಕಿಂಗ್ ಸ್ಟಿಕ್ ಹುಡುಕಾಡುತ್ತಾ ಬಂದಿದ್ದಾರೆ. ಅವರು ಬಂದಿದ್ದು ತಂದೆಗೆ ತಿಳಿದಿಲ್ಲ. ಅದ್ಕೇ ಅವರು ತಂದೆ ಬಂದರೂ ಕೊಡಬೇಡಿ ಅಂತ ಹೇಳಿದ್ದು. ಆ ಮುದುಕ ಬಹುಶಃ ಬಂದೇ ಬರಬಹುದು ನಾಣಯ್ಯ, ಇದರ ಮಾಲೀಕ ನಿನ್ನಲ್ಲಿ ಏನು ಖರೀದಿ ಮಾಡಿದ ಅಂತ ಗೊತ್ತೆ?"

"ಯಾವುದೋ ಔಷಧಿ. ಸರಿಯಾಗಿ ನೆನಪಿಲ್ಲ."

"ಔಷಧಿ? ಹಾಗಿದ್ರೆ ವೈದ್ಯರ ಚೀಟಿ ತಂದಿದ್ದನೇ?"

"ಇಲ್ಲ. ಅವ್ನೇ ಔಷಧಿಯ ಹೆಸರು ಹೇಳಿದ್ದ."

"ಓಹ್! ಚೀಟಿ ಇದ್ದಿದ್ದರೆ ವೈದ್ಯರಲ್ಲಿ ವಿಚಾರಿಸಬಹುದಿತ್ತು. ಆ ವ್ಯಕ್ತಿ ನಾಳೆ ಬಂದಾನು, ನೋಡೋಣ."

ನಾಣಯ್ಯ ಹೋದ ಮೇಲೆ, ಕರಮಚಂದ ಬಹಳ ಹೊತ್ತು ಆ ಬಗ್ಗೇ ಯೋಚಿಸುತ್ತಿದ್ದ.

★★★

ಮರುದಿನ ನಮಗೊಂದು ಆಘಾತ ಕಾದಿತ್ತು. ಬೆಳಗ್ಗೆ ಧಾವಿಸಿ ಬಂದ ನಾಣಯ್ಯನ ಮೊಗದಲ್ಲಿ ಗಾಬರಿ.

"ನಿನ್ನೆ ರಾತ್ರಿ ನಮ್ಮ ಅಂಗಡಿಯಲ್ಲಿ ಕಳ್ಳತನ ಆಯ್ತು!"

"ಹೌದೇ? ಪೊಲೀಸರಿಗೆ ತಿಳಿಸಿದೆಯಾ?"

"ಇಲ್ಲ. ಯಾಕೆಂದರೆ ಏನೂ ಕದ್ದು ಹೋಗಿಲ್ಲ, ಆ ವಾಕಿಂಗ್ ಸ್ಟಿಕ್ ಹೊರತು ಪಡಿಸಿ!"

"ಹೌದೇ? ಬಹಳ ವಿಚಿತ್ರ. ನಾಣಯ್ಯ, ನಡಿ, ಪರಿಶೀಲನೆ ಮಾಡೋಣ."

ನಾಣಯ್ಯನದ್ದು ಹಳೆಯ ಹೆಂಚಿನ ಅಂಗಡಿ. ಕಳ್ಳರು ಸುಲಭವಾಗಿ, ಮಾಡಿನ ಮೂಲಕ ಇಳಿದು ಬಂದಿದ್ದರು. ಹೆಚ್ಚೇನೂ ವಸ್ತುಗಳು ಚೆಲ್ಲಾಪಿಲ್ಲಿಯಾಗಿರಲಿಲ್ಲ. ಕಳ್ಳರಿಗೆ ಬೇಕಾಗಿದ್ದು ಸುಲಭದಲ್ಲೇ ಸಿಕ್ಕಿರಬೇಕು!

"ಆ ಮುದುಕನ ಮಕ್ಕಳೇ ಕಳ್ಳರಾಗಿರಬೇಕಲ್ವೇ?" ನಾನು ಅನುಮಾನ ಹೊರಹಾಕಿದೆ.

"ಸಂಶಯವಿಲ್ಲ, ಬಿದ್ದಪ್ಪ! ಶ್ರೀಮಂತ ಕಳ್ಳರು! ಆ ವಾಕಿಂಗ್ ಸ್ಟಿಕ್ಕಿನಲ್ಲಿ ಅಂತಹದು ಏನಿತ್ತು?"

"ಇವತ್ತು ಆ ಮುದುಕ ಬಂದರೆ ಏನು ಹೇಳುವುದು?" ನಾಣಯ್ಯನ ಸಮಸ್ಯೆ.

"ನಡೆದಿದ್ದನ್ನ ಹೇಳು. ಆ ಮುದುಕ ಖರೀದಿ ಮಾಡಿದ ಔಷಧ ಯಾವುದೆಂದು ಗೊತ್ತೆ?"

ನಾಣಯ್ಯ ತರಾತುರಿಯಿಂದ ಬಿಲ್ಲು ಪುಸ್ತಕ ತೆರೆದ. ಬೆರಳುಗಳು ಚುರುಕಿನಲ್ಲಿ ಪುಟ ತಿರುಗಿಸಿದವು.

"ನೋಡಿ, ಆತ ಒರಿಜನಲ್ ಒಯ್ದಿಲ್ಲ. ಆತನ ನಂತರ ಬಂದವನು ಒಂದ್ ಸಾವಿರ ರೂಪಾಯಿ ವ್ಯಾಪಾರ ಮಾಡಿದ್ದರಿಂದ ಅವ್ನ ಬಿಲ್ಲು ಚೆನ್ನಾಗಿ ನೆನಪಿದೆ. ಇದು ಅವ್ನು ಖರೀದಿ ಮಾಡಿದ ಔಷಧ."

ಕರಮಚಂದ ಮೊಬೈಲಿನಿಂದ ಅದರ ಫೋಟೊ ತೆಗೆದ.

ಆ ನಂತರ ಕಚೇರಿಯಲ್ಲಿ ಕರಮಚಂದ ಗಣಕಯಂತ್ರದಲ್ಲಿ ತಲ್ಲೀನನಾಗಿದ್ದವನು ಏಕಾಏಕಿ ಪ್ರಶ್ನಿಸಿದ,

"ಪಕ್ಕದ ತಲಕಾವೇರಿ ರಸ್ತೆಯಲ್ಲೊಬ್ಬ ಮೂಳೆ ತಜ್ಞ ಇದ್ದಾನಲ್ಲ. ಆತನ ಹೆಸರೇನು?"

"ಮಹಾದೇವಪ್ಪ. ಯಾಕೆ?"

"ಅಲ್ಲೇ ಪಕ್ಕದಲ್ಲಿ ಒಂದು ಮೆಡಿಕಲ್ ಇದೆಯಲ್ಲಾ?"

ನಾನು ತಲೆಯಾಡಿಸಿದೆ.

"ನೀನೀಗಲೇ ಅಲ್ಲಿಗೆ ಹೋಗಿ ಈ ಮಾತ್ರೆ ಇದೆಯಾ ಅಂತ ನೋಡು."